**ಕರ್ನಾಟಕ ಸರ್ಕಾರ**
**(ಪಿ.ಆರ್.ಪಿ.67)**

| |
|---|
| **ಹೇಳಿಕೆ ಹಾಳೆ**<br>**(ಆರ್.ಪಿ.ಸಂಖ್ಯೆ 57)**<br>**ನಮೂನೆ ಸಂಖ್ಯೆ 4** |

<u>ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ</u>

**<u>ಸೆಷನ್ಸ್ ಕೇಸ್ ನಂಬರ್ ಃ 167/2021</u>**

ಫ್ರಾಸಾ-1 ಚಾಸಾ- 1

| | | |
|---|---|---|
| ಸಾಕ್ಷಿದಾರರ ಹೆಸರುಃ | ಃ | ಹೆಚ್.ಮಹಮದ್ |
| ತಂದೆಯ ಹೆಸರುಃ | ಃ | ಉಸ್ತಾಫ್ |
| ವಯಸ್ಸುಃ | ಃ | 61 ವರ್ಷ |
| ಉದ್ಯೋಗಃ | ಃ | ನಿವೃತ್ತ ಪಿ.ಡಿ.ಒ |
| ವಾಸಃ | ಃ | ಆಲೂರು |

**<u>ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕಃ 07-08-2024</u>**

**<u>ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ</u>**

ನಾನು ಮಡಬಲು ಗ್ರಾಮ ಪಂಚಾಯಿತಿಯಲ್ಲಿ 2013 ರಿಂದ 2023 ರವರೆಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ಚಾಸಾ-2 ರಿಂದ 5 ರವರ ಪರಿಚಯ ಇದೆ. ಆರೋಪಿತನ ಪರಿಚಯವಿದೆ. ಚಾಸಾ-2 ರವರು ಕಂಪ್ಯೂಟರ್ ಆಪರೇಟರ್ ಆಗಿ ಚಾಸಾ-3 ರವರು ಅಟೆಂಡರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ನನ್ನ ಕರ್ತವ್ಯದ ಅವಧಿ ಬೆಳಿಗ್ಗೆ 10.00 ರಿಂದ ಸಂಜೆ 5-30 ವರೆಗೆ ಇತ್ತು.

3. ದಿನಾಂಕ 31.08.2020 ರಂದು ನಾನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಮಡಬಲುನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಸಂಜೆ 4-00 ಗಂಟೆಗೆ ನ್ಯಾಯಾಲಯದ ಮುಂದಿರುವ ಆರೋಪಿತ ಪುಟ್ಟರಾಜು ಕಛೇರಿಗೆ ಬಂದು, ತೋಟಗಾರಿಕೆ ಇಲಾಖೆಯಿಂದ ಮೆಣಸಿನ ಬಳ್ಳಿಯ ಬಗ್ಗೆ ನೀಡುವ ಸಹಾಯಧನ ನೀಡುವಂತೆ ಗಲಾಟೆ ಮಾಡಿದರು. ಸದರಿಯವರು

ಅರ್ಜಿಯನ್ನು ನೀಡಿರಲಿಲ್ಲ, ಆದ್ದರಿಂದ ಅವರಿಗೆ ಆ ರೀತಿ ಸಹಾಯಧನ ನೀಡಲು ಬರುವುದಿಲ್ಲ. ಸಹಾಯಧನ ನೀಡಬಲು ಬರುವುದಿಲ್ಲವೆಂದು ತಿಳಿಸಿ, ಅರ್ಜಿಯನ್ನು ನೀಡುವಂತೆ ತಿಳಿಸಿದೆ. ಆಗ ಆತ ಬೋಳಿಮಗನೆ, ಸೂಳೆಮಗನೆ, ಕತ್ತರಿಸಿ ಹಾಕ್ತೀನಿ, ಕೊಲೆ ಮಾಡುತ್ತೇನೆ ಎಂದು ನನ್ನ ಕುತ್ತಿಗೆ ಪಟ್ಟಿ ಹಿಡಿದು ಎಳೆದಾಡಿದ. ನಾನು ಆಗ ಕಂಪ್ಯೂಟರ್ ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಇದರಿಂದ ನನ್ನ ಕರ್ತವ್ಯಕ್ಕೆ ಅಡ್ಡಿಯಾಯಿತು. ಈ ಕುರಿತು ಮೇಲಧಿಕಾರಿಗೆ ವಿಷಯವನ್ನು ತಿಳಿಸಿದೆ ನಂತರ ಆರೋಪಿತನ ವಿರುದ್ಧ ಪೊಲೀಸರಿಗೆ ದೂರನ್ನು ಕೊಟ್ಟೆ.

4.ದಿನಾಂಕ 01.09.2020 ರಂದು 3-45 – 4-00 ಗಂಟೆಗೆ ನಾನು ಕರ್ತವ್ಯದಲ್ಲಿ ಇದ್ದಾಗ ಆರೋಪಿತ ಲಾಂಗ್ ಕತ್ತಿ ತಂದು ನನ್ನನ್ನು ತುಂಡುತುಂಡು ಮಾಡಿ ನಾಯಿ ನರಿಗೆ ಹಾಕುತ್ತೇನೆ ಎಂದು ಹೇಳಿದ. ನಂತರ ಲಾಂಗ್ ಕತ್ತಿಯಿಂದ ಬಲವಾಗಿ ಬೀಸಿದ, ನಾನು ಬಗ್ಗಿದೆ ಆಗ ಏಟು ಎಡಭುಜಕ್ಕೆ ಬಿತ್ತು. ಇದರಿಂದ ರಕ್ತಹರಿಯಲು ಪ್ರಾರಂಭಿಸಿ ಬಟ್ಟೆ ರಕ್ತಸಿಕ್ತವಾಯಿತು. ಪೊಲೀಸರಿಗೆ ಫೋನ್ ಮಾಡಿ ತಿಳಿಸಿದೆ, ಪೊಲೀಸರು ಬಂದರು. ಆ ಸಂದರ್ಭದಲ್ಲಿ ಚಾಸಾ-2 ಬಸವರಾಜು ಮತ್ತು ಚಾಸಾ-3 ರವರು ಆರೋಪಿತನನ್ನು ಗಟ್ಟಿಯಾಗಿ ಹಿಡಿದುಕೊಂಡರು. ಆದಾಗ್ಯೂ ಆರೋಪಿತ ನನ್ನನ್ನು ಬಿಡುವುದಿಲ್ಲ, ಕೊಲೆ ಮಾಡುತ್ತೇನೆ ಎಂದು ಹೇಳಿ, ನನ್ನ ಕೊಲೆ ಮಾಡಲು ಹುಡುಗರನ್ನು ತಯಾರಿಸಿದ್ದೇನೆ ಎಂದು ಜೋರಾಗಿ ಬೈದು ಹೇಳಿದ. ನಾನು ಕಛೇರಿಯಲ್ಲಿ ಆ ಸಂದರ್ಭದಲ್ಲಿ ಕಂಪ್ಯೂಟರ್ ಬಳಸಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಆರೋಪಿ ಈ ರೀತ ಹಲ್ಲೆ ಮಾಡಿದಾಗ ಕಂಪ್ಯೂಟರ್ ಮಾನೀಟರ್ ಸಿಪಿಯು ಎಲ್ಲ ಬಿದ್ದು ಹಾಳಾಯಿತು. ಇದರಿಂದ ಸರ್ಕಾರಕ್ಕೆ ಅಂದಾಜು 60 ರಿಂದ 70 ಸಾವಿರ ರೂ ನಷ್ಟವಾಗಿರುತ್ತದೆ. ಚಾಸಾ-2 ಮತ್ತು 3 ರವರು ನನ್ನನ್ನು ಆಲೂರು ಸರ್ಕಾರಿ ಆಸ್ಪತ್ರೆಗೆ ಜೀಪಿನಲ್ಲಿ ಕರೆದುಕೊಂಡು ಹೋದರು. ಆಸ್ಪತ್ರೆಯಿಲ್ಲಿ ಒಂದು ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೇನೆ. ನಾನು ಆಸ್ಪತ್ರೆಯಲ್ಲಿದ್ದಾಗಲೇ ಪೊಲೀಸರು ನನ್ನ ದೂರನ್ನು ಪಡೆದರು. ಸದರಿ ದೂರನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-1 ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಆರೋಪಿತ ನನಗೆ ಹಲ್ಲೆ ಮಾಡಿದ ಲಾಂಗ್ ಕತ್ತಿಯನ್ನು ನೋಡಿದರೆ ಗುರುತಿಸಬಲ್ಲೆ. (ನ್ಯಾಯಾಲಯದ ಮುಂದೆ ಇರುವ ಸೀಲುಮಾಡಿರುವ ಕವರ್ ಗಳನ್ನು ಒಡೆಯಲು ಅಭಿಯೋಜಕರು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಗಿ ಒಡೆಯಲಾಯಿತು). ಈಗ ತೋರಿಸಿದ ಸದರಿ ಲಾಂಗ್ ಕತ್ತಿಯಿಂದಲೇ ಆರೋಪಿತ ನನಗೆ ಹಲ್ಲೆ ಮಾಡಿದ್ದಾನೆ. ಅದನ್ನು ಎಂ.ಒ.1 ಎಂದು ಗುರುತಿಸಲಾಯಿತು. ಈಗ ತೋರಿಸಿದ ಶರ್ಟ್ ಅಂದು ನಾನು ಧರಿಸಿದ್ದು ರಕ್ತಸಿಕ್ತವಾಗಿರುತ್ತದೆ. ಅದನ್ನು ಎಂ.ಒ.2 ಎಂದು ಗುರುತಿಸಲಾಯಿತು. ಈಗ ತೋರಿಸಿದ ಕಂಪ್ಯೂಟರ್ ಮಾನೀಟರ್, ಡಿವಿಆರ್ ನ್ನು ನೋಡಿ ಗುರುತಿಸಿದ್ದೇನೆ. ಅವುಗಳನ್ನು ಕ್ರಮವಾಗಿ ಎಂ.ಒ.3 ಮತ್ತು 4 ಎಂದು

ಗುರುತಿಸಲಾಗಿದೆ. ಎಂ.ಒ.2 ಶರ್ಟನ್ನು ಮಾರನೇ ದಿನ ಪೊಲೀಸರಿಗೆ ನೀಡಿದ್ದೇನೆ. ಆ ಕುರಿತು ಪೊಲೀಸರು ಮಹಜರ್ ಮಾಡಿ ನನ್ನ ಸಹಿ ಪಡೆದಿದ್ದಾರೆ. ಸದರಿ ಮಹಜರ್ ನಿಪಿ-2. ನನ್ನ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಎಂ.ಒ.4 ನ್ನು ವಶಪಡಿಸಿಕೊಂಡ ಬಗ್ಗೆ ಪೊಲೀಸರು ಮಹಜರ್ ಮಾಡಿದ್ದಾರೆ. ಸದರಿ ಮಹಜರನ್ನು ನೋಡಿ ಗುರುತಿಸುತ್ತಿದ್ದು ಅದನ್ನು ನಿಪಿ-3 ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಆರೋಪಿ ನನ್ನನ್ನು ಕೊಲೆ ಮಾಡುವ ಉದ್ದೇಶದಿಂದಲೇ ನನಗೆ ಹಲ್ಲೆ ಮಾಡಿದ್ದಾನೆ. ಡಿವಿಆರ್ ನಲ್ಲಿ ಅಂದು ನಡೆದ ದೃಶ್ಯಾವಳಿ ಸೆರೆಯಾಗಿರುವುದರಿಂದ ಅದನ್ನು ಅಮಾನತ್ತುಪಡಿಸಲಾಗಿದೆ.

**<u>ಪಾಟೀ ಸವಾಲುಃ- ಆರೋಪಿ ಪರ ಶ್ರೀ ಹೆಚ್.ಎಸ್.ಎಂ. ವಕೀಲರಿಂದಃ-</u>**

ನನ್ನ ಕೈಕೆಳಗೆ 8 ಜನ ಕೆಲಸ ಮಾಡುತ್ತಿದ್ದು ಅವರ ಪೈಕಿ ಇಬ್ಬರು ನೀರು ಬಿಡುವವರು, ಅವರು ಕಛೇರಿಯ ಒಳಗೆ ಬರುವುದಿಲ್ಲ, ಇನ್ನುಳಿದಂತೆ ಇಬ್ಬರು ಚಾಸಾ-2 ಮತ್ತು 3, ಇನ್ನುಳಿದಂತೆ 4 ಜನ ಕೂಡ ನೀರು ಬಿಡುವವರು. ಆ 4 ಜನರ ಪೈಕಿ ಒಬ್ಬರ ಹೆಸರು ಮಂಜುನಾಥ್, ಉಳಿದವರ ಹೆಸರು ನೆನಪಿಗೆ ಬರುತ್ತಿಲ್ಲ. ಅವರುಗಳ ಹೆಸರು ನೆನಪಿದ್ದರೂ ಸಹ ನೆನಪಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಂಟೂ ಜನರಿಗೂ ವೇತನವನ್ನು ನಾನೇ ಕೊಡುತ್ತಿದ್ದೆ, ಹಾಜರಾತಿ ಪುಸ್ತಕ ಇಟ್ಟಿದ್ದೇವೆ ಎನ್ನುವುದು ನಿಜ. ಗಲಾಟೆಯಾದಾಗ ಮೇಲೆ ಹೇಳಿದ ಎಂಟೂ ಜನ ಕಛೇರಿಯಲ್ಲಿ ಇದ್ದರು ಎಂದರೆ ಸರಿಯಲ್ಲ. ದೂರನ್ನು ನಾನೇ ಪೊಲೀಸರಿಗೆ ಬರೆದುಕೊಟ್ಟಿದ್ದೇನೆ.

2. 31.08.2020 ರಂದು ಗಲಾಟೆಯಾದ ಬಗ್ಗೆ ಮರುದಿನ ಬೆಳಿಗ್ಗೆ ಅಂದರೆ 01.09.2020 ರಂದು ದೂರು ಕೊಟ್ಟಿದ್ದೇನೆ. 01.09.2020 ರಂದು ಸಾಯಂಕಾಲ ಆದ ಗಲಾಟೆ ಕುರಿತಂತೆ ಆಸ್ಪತ್ರೆಯಲ್ಲಿ ದೂರು ಕೊಟ್ಟಿದ್ದೇನೆ. ಪಂಚಾಯಿತಿಯ ಮುಂಭಾಗದಲ್ಲಿ ಶಾಲೆ ಇದೆ ಎನ್ನುವುದು ನಿಜ. ಅಲ್ಲಿ ಶಿಕ್ಷಕರು, ಮಕ್ಕಳು ಇರುತ್ತಾರೆ ಎಂದರೆ ದೂರದಲ್ಲಿ ಇದ್ದಾರೆ. ಪಂಚಾಯಿತಿಯ ಹಿಂಭಾಗದಲ್ಲಿ ಮನೆಗಳಿವೆ ಎಂದರೆ ಸರಿಯಲ್ಲ. ನಾವು ಪಂಚಾಯಿತಿಯಲ್ಲಿ ಮಾತನಾಡುವುದು, ಗಲಾಟೆ ಮಾಡಿದರೆ ಶಾಲೆಗೆ ಕೇಳಿಸುತ್ತದೆ ಎಂದರೆ ಸರಿಯಲ್ಲ. ಶಾಲೆ ಹತ್ತಿರದಲ್ಲೇ ಇದೆ, ನಾವು ಮಾತನಾಡಿದಲ್ಲಿ, ಗಲಾಟೆ ಮಾಡಿದಲ್ಲಿ ಅಲ್ಲಿಗೆ ಕೇಳುತ್ತದೆ ಎನ್ನುವುದು ಸುಳ್ಳು. 01.09.2020 ರಂದು ಬೆಳಿಗ್ಗೆ ಮೇಲಧಿಕಾರಿಯನ್ನು ಕೇಳಿ ದೂರು ಕೊಟ್ಟಿದ್ದೇನೆ. ಅ ರೀತಿ ಕೊಟ್ಟ ದೂರು ನ್ಯಾಯಾಲಯದಲ್ಲಿ ಇದೆ. ಅರೋಪಿತ ಎದುರುಗಡೆಯಿಂದಲೇ ಬಂದು ಮುಂದುಗಡೆಯಿಂದ ನನಗೆ ಹೊಡೆದಿದ್ದಾನೆ. ಆ ರೀತಿ ನಾನು ದೂರಿನಲ್ಲಿ ಹೇಳಿದ್ದೇನೆ. ಆ ರೀತಿ

ಹಲ್ಲೆ ಮಾಡಿದ್ದಾರೆ ಎಂದು ಹೇಳಿದಾಗ, ಮಾನೀಟರ್ 2, ಸಿಪಿಯು 2, ಒಂದು ಪ್ರಿಂಟರ್, ಬಯೋಮೆಟ್ರಿಕ್ ಯಂತ್ರ ಧ್ವಂಸ ಮಾಡಿದ್ದಾರೆ ಎಂದು ದೂರಿನಲ್ಲಿ ಹೇಳಿದ್ದೇನೆ ಎಂದರೆ ನಿಜ. ಆದರೆ ಪ್ರಿಂಟರ್, ಸಿಪಿಯು ಮತ್ತು ಬಯೋಮೆಟ್ರಿಕ್ ಯಂತ್ರ ನ್ಯಾಯಾಲಯದ ಮುಂದೆ ಇಲ್ಲ ಎನ್ನುವುದು ನಿಜ. ಈ ಘಟನೆ ಆಗಿದೆ ಎಂದು ಹೇಳುವಾಗ ಚಾಸಾ-2 ಮತ್ತು 3 ರವರು ಕಛೇರಿಯಲ್ಲಿ ಇರಲಿಲ್ಲ ಎಂದರೆ ಸುಳ್ಳು. ದೂರನ್ನು ಆಸ್ಪತ್ರೆಯಲ್ಲಿ ತೆಗೆದುಕೊಂಡ ನಂತರ, ಪೊಲೀಸರು ನನ್ನನ್ನು ಭೇಟಿಯಾಗಿಲ್ಲ ಎನ್ನುವುದು ಸರಿಯಲ್ಲ. 2 ತಿಂಗಳು ಬಿಟ್ಟು ಕಛೇರಿಯಲ್ಲಿಯ ಫೂಟೇಜ್ ತೆಗೆದುಕೊಳ್ಳಲು ಬಂದಿದ್ದಾರೆ. ಮಾರನೇ ದಿನವೇ ಎಂ.ಒ.3 ಮತ್ತು 4 ನ್ನು ಪೊಲೀಸರು ತೆಗೆದುಕೊಂಡು ಹೋಗಿದ್ದಾರೆ.

3. ಆರೋಪಿತ ಕಾಳುಮೆಣಸಿನ ಗಿಡಕ್ಕೆ ಸಹಾಯಧನ ಪಡೆಯಲು ಅರ್ಜಿಯನ್ನು ನೀಡಿದ್ದ ಎಂದರೆ ಸರಿಯಲ್ಲ. ಆರೋಪಿತ ಕಾಳುಮೆಣಸಿನ ಗಿಡಕ್ಕೆ ಸಹಾಯಧನ ಪಡೆಯಲು ಅರ್ಜಿ ನೀಡಿದ್ದು ಸಹಾಯಧನ ನೀಡಬೇಕೆಂದು ಕೋರಿದಾಗ, ನಾನು ಲಂಚ ಕೇಳಿದ್ದರಿಂದ ಆತ ಲೋಕಾಯುಕ್ತ ಪೊಲೀಸರಿಗೆ ದೂರು ಕೊಡುತ್ತೇನೆ ಎಂದು ಹೇಳಿದ್ದರಿಂದ ಈ ಸುಳ್ಳು ದೂರನ್ನು ಆತನ ಮೇಲೆ ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತ ಲಾಂಗ್ ಮಚ್ಚು ತಂದು ನನಗೆ ಹೊಡೆದಿದ್ದಾನೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಸಿಸಿಟಿವಿ ಫೂಟೇಜ್ ನಲ್ಲಿ ಇದೆ ಗಮನಿಸಬಹುದು.

4. ನಮ್ಮ ಕಛೇರಿಯಲ್ಲಿ ಕಿಟಕಿಗಳು ಇದ್ದು ಅವುಗಳ ಬಾಗಿಲುಗಳು ಒಳಗಿನಿಂದ ಇವೆ ಎಂದರೆ ಸರಿಯಲ್ಲ, ಹೊರಗಿನಿಂದ ಇವೆ. ಸದರಿ ಕಿಟಕಿ ಹಾಕಲು ಹೋಗಿ ಭುಜಕ್ಕೆ ಏಟು ಮಾಡಿಕೊಂಡಿದ್ದೇನೆ, ಆರೋಪಿತ ಯಾವುದೇ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಎಂ.ಒ.3 ಮತ್ತು 4 ನ್ನು ಆರೋಪಿತ ಹಾಳುಮಾಡಿಲ್ಲ, ನಾನೇ ಕೆಡವಿ ಹಾಳಾಗಿದೆ ಎಂದರೆ ಸುಳ್ಳು. ಅರೋಪಿತ ಎಂ.ಒ.1 ರಿಂದ ತುಂಬಾ ಬಲವಾಗಿ ಬೀಸಿದ್ದ, ನಾನು ಬಗ್ಗಿದ್ದರಿಂದ ಏಟು ಭುಜಕ್ಕೆ ಬಿದ್ದಿದೆ. ನಾನು ಹೇಳಿದಂತೆ ಆರೋಪಿತ ಹೊಡೆದಿದ್ದಲ್ಲಿ ಬಹಳ ಏಟಾಗುತ್ತಿತ್ತು, ನಾನು ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಂ.ಒ.1 ನ್ನು ಪೊಲೀಸರು ಅಮಾನತ್ತುಪಡಿಸುವಾಗ ನಾನು ಇದ್ದೆ. ಎಂ.ಒ.1 ನ್ನು ನಾನು ಸೃಷ್ಟಿಸಿದ್ದೇನೆ, ಆರೋಪಿತ ಅದನ್ನು ತೆಗೆದುಕೊಂಡು ಬಂದಿಲ್ಲ ಮತ್ತು ಅದರಿಂದ ಹಲ್ಲೆ ಮಾಡಿಲ್ಲ ಎಂದರೆ ಸುಳ್ಳು. ಎಂ.ಒ.2 ಶರ್ಟ್ ನ್ನು ಪೊಲೀಸರು ಅಮಾನತ್ತುಪಡಿಸಿಕೊಂಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-2 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಘಟನೆಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ, ನಾನು ಸುಳ್ಳು ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆಸ್ಪತ್ರೆಗೆ ಚಾಸಾ-2

ರವರು ಕರೆದುಕೊಂಡು ಹೋಗಿರುತ್ತಾರೆ. ವೈದ್ಯರು ನನಗೆ ಎಲ್ಲೆಲ್ಲಿಗೆ ಏಟಾಗಿದೆ ಎಂದು ಬರೆದುಕೊಂಡಿದ್ದಾರೆ. ನನ್ನ ಎಡಭುಜಕ್ಕೆ ಆದ ಏಟಿಗೆ ಹೊಲಿಗೆ ಹಾಕಲಾಗಿದೆ. ವೈದ್ಯರ ಮುಂದೆ, ಯಾರಿಂದ ನನಗೆ ಹಲ್ಲೆಯಾಗಿದೆ ಎಂದು ತಿಳಿಸಿದ್ದೇನೆ.

**ಮರು ವಿಚಾರಣೆಃ** ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**